ಈ) ಮಂಗಳೂರಿನ ಉಲ್ಲಾಳ ಕಡಲು ತೀರದಲ್ಲಿ ಪ್ರವಾಸಿ ಸೌಲಭ್ಯವನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ ಈ ಕಡಲು ತೀರವು ಹೆಚ್ಚಿನ ಕಡಲು ಕೊರೆತಕ್ಕೆ ಒಳಗಾಗಿರುವುದರಿಂದ ಇದರ ಬಳಿ ಇರುವ ಸೋಮೇಶ್ವರ ಕಡಲು ತೀರವನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿ ಇದಕ್ಕಾಗಿ ರೂ.22.43 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದ.ಕ ರವರಿಗೆ ಬಿಡುಗಡೆ ಮಾಡಲಾಗಿದೆ.

786 ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಪೊಲೀಸ್ ಠಾಣೆಗಳ ಮತ್ತು ಹೊರಠಾಣೆಗಳ (ಔಟ್‌ಪೋಸ್ಟ್) ಸಂಖ್ಯೆ ಎಷ್ಟು; (ಠಾಣಾವಾರು ವಿವರಗಳನ್ನು ಒದಗಿಸುವುದು);

ಆ) ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳು ಮತ್ತು ಔಟ್ ಪೋಸ್ಟ್‌ಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ;

ಇ) ಬಸವಕಲ್ಯಾಣ ಮತಕ್ಷೇತ್ರವು ಮಹಾರಾಷ್ಟ್ರ ರಾಜ್ಯದ ಗಡಿಭಾಗದಲ್ಲಿ ಬರುತ್ತಿದ್ದು, ಈ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಹಿನೂರು ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಬಗ್ಗೆ ಹಲವಾರು ಮನವಿಗಳು ಸರ್ಕಾರದ ಮುಂದೆ ಇರುವುದು ನಿಜವಲ್ಲವೆ;

ಈ) ಹಾಗಿದ್ದಲ್ಲಿ, ಕೊಹಿನೂರು ಗ್ರಾಮದಲ್ಲಿ ಹೊಸ ಪೊಲೀಸ್ ಠಾಣೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಉ) ಹೊಸ ಪೊಲೀಸ್ ಠಾಣೆಗಳು ಹಾಗೂ ಪೊಲೀಸ್ ಔಟ್‌ಪೋಸ್ಟ್‌ಗಳನ್ನು ಪ್ರಾರಂಭಿಸಲು ಅನುಸರಿಸುವ ಮಾನದಂಡಗಳೇನು?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 28 ಪೊಲೀಸ್ ಠಾಣೆಗಳು ಹಾಗೂ 5 ಪೊಲೀಸ್ ಉಪಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಠಾಣಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬೀದರ್ ಜಿಲ್ಲಾ ಪೊಲೀಸ್ ಘಟಕದಿಂದ ಧೂಪತ್ ಮಹಾಗಾಂವ್‌ನಲ್ಲಿ ಹೊರಠಾಣೆ ಸೃಜಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ.

ಇ) ಹೌದು.

ಈ) ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದ ನಂತರ ಹಣಕಾಸಿನ ಲಭ್ಯತೆಗನುಸಾರ ಇಲ್ಲಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಉ) ಹೊಸದಾಗಿ ಪೊಲೀಸ್ ಠಾಣೆ / ಸಂಚಾರಿ ಠಾಣೆಗಳು / ಪೊಲೀಸ್ ಹೊರಠಾಣೆಗಳನ್ನು ಪ್ರಾರಂಭಿಸಲು ರಾಷ್ಟ್ರೀಯ ಪೊಲೀಸ್ ಆಯೋಗವು 7ನೇ ವರದಿಯಲ್ಲಿ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಿದೆ;

1) ವ್ಯಾಪ್ತಿ – 150 ಚ.ಕಿ.ಮೀ.

2) ಜನಸಂಖ್ಯೆ – 60,000

3) ಅಪರಾಧ ಪ್ರಕರಣಗಳು ವಾರ್ಷಿಕ 300 ಪ್ರಕರಣಗಳು

4) ಟ್ರಾಫಿಕ್ ಪೊಲೀಸ್ ಠಾಣೆಗೆ – ವರ್ಷಕ್ಕೆ 150 ರಿಂದ 250 ಸಂಚಾರ ಅಪಘಾತ ಪ್ರಕರಣಗಳು ವರದಿ ಆಗಿರಬೇಕು.

ಈ ಷರತ್ತುಗಳು ನಗರ ವ್ಯಾಪ್ತಿಯ ಪೊಲೀಸ್ ಠಾಣೆಗಳಿಗೆ ಅನ್ವಯಿಸುವುದಿಲ್ಲ.

ಅನುಬಂಧ

ಪೊಲೀಸ್ ಠಾಣೆಗಳು :

1) ಬೀದರ್ ಗ್ರಾಮೀಣ ಠಾಣೆ
2) ಜನವಾಡ ಠಾಣೆ
3) ಬಗೆದಲ್ ಠಾಣೆ
4) ಹಳ್ಳಿಖೇಡ ಠಾಣೆ
5) ಚಿಟಗುಪ್ಪ ಠಾಣೆ
6) ಮನ್ನಾಖೇಳ್ಳಿ ಠಾಣೆ
7) ಬೇಮಳಖೇಡಾ ಠಾಣೆ
8) ಬಸವಕಲ್ಯಾಣ ಗ್ರಾಮೀಣ ಠಾಣೆ
9) ಹುಲಸೂರು ಠಾಣೆ
10) ಮಂಠಾಳ ಠಾಣೆ
11) ಮುಡಬಿ ಠಾಣೆ
12) ಭಾಲ್ಕಿ ಗ್ರಾಮೀಣ ಠಾಣೆ

13) ಖಟಕ ಚಿಂಚೋಳಿ ಠಾಣೆ
14) ಧನ್ನೂರಾ ಠಾಣೆ
15) ಸಂತಪೂರ ಠಾಣೆ
16) ಚಿಂತಾಕಿ ಠಾಣೆ
17) ಕಮಲನಗರ ಠಾಣೆ
18) ಕುಶನೂರು ಠಾಣೆ
19) ಬೀದರ್ ಸಂಚಾರ ಠಾಣೆ
20) ಬಸವಕಲ್ಯಾಣ ಸಂಚಾರ ಠಾಣೆ
21) ಬೀದರ್ ನಗರ ಠಾಣೆ
22) ಬೀದರ ಮಾರ್ಕೆಟ್ ಠಾಣೆ
23) ಬೀದರ ಗಾಂಧಿಗಂಜ ಠಾಣೆ
24) ಬೀದರ ನೂತನ ನಗರ ಠಾಣೆ
25) ಹುಮನಾಬಾದ ಠಾಣೆ
26) ಬಸವಕಲ್ಯಾಣ ನಗರ ಠಾಣೆ
27) ಭಾಲ್ಕಿ ನಗರ ಠಾಣೆ
28) ಔರಾದ ಠಾಣೆ

ಪೊಲೀಸ್ ಉಪಠಾಣೆಗಳು :

1) ಮೆಹಕರ ಹೊರಠಾಣೆ
2) ಮನ್ನಳ್ಳಿ ಹೊರಠಾಣೆ
3) ರಾಜೇಶ್ವರ ಹೊರಠಾಣೆ
4) ಹೊಕ್ರಾಣಾ ಹೊರಠಾಣೆ
5) ನಿಟ್ಟೂರ ಹೊರಠಾಣೆ